**ಇಂದು ದಿಃ*01.03.2025* ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು ಃ ಆರೋಪಿ ಪರ ಶ್ರೀ.ಸಿ.ಕೆ.ಎಂ. ವಕೀಲರಿಂದಃ**

ದಿನಾಂಕಃ 01-06-1993 ರಂದು ಶಿಕ್ಷಕಿಯಾಗಿ ನೇಮಕ ಮಾಡಿಕೊಂಡಿದ್ದೇನೆ. ಯಾವುದೇ ವಿದ್ಯಾಸಂಸ್ಥೆಯಲ್ಲಿ ಶಿಕ್ಷಕಿಯಾಗಿ ನೇಮಕಗೊಳ್ಳುವ ಮೊದಲು ಅರ್ಜಿ ಸಲ್ಲಿಸಬೇಕು ಎಂದರೆ ಸರಿ. ಮಿಳಿಂದ ವಿದ್ಯಾಸಂಸ್ಥೆಗೆ ನನ್ನನ್ನು ಶಿಕ್ಷಕಿಯಾಗಿ ನೇಮಿಸಬೇಕೆಂದು ಅರ್ಜಿ ಕೊಟ್ಟಿದೆ. ದಿನಾಂಕಃ 01-06-1993 ರಂದು ನಾನು ವಿದ್ಯಾಸಂಸ್ಥೆಯ ಮುಖ್ಯಸ್ಥರಿಗೆ ಅರ್ಜಿ ಸಲ್ಲಿಸಿದೆ. ಆ ಸಂಸ್ಥೆಯ ಮುಖ್ಯಸ್ಥರು ಪ್ರೊ.ಗೋವಿಂದಯ್ಯ ರವರು ಆಗಿದ್ದರು ಎಂದರೆ ಸರಿ. ಸಾಕ್ಷಿಗೆ ಒಂದು ಜ್ಞಾಪನ ದೃಢಿಕೃತ ಪ್ರತಿ ತೋರಿಸಿ ಅದು ನನ್ನ ನೇಮಕಾತಿ ಪತ್ರ ಎಂದು ಒಪ್ಪಿಕೊಂಡ ಮೇರೆಗೆ ಸದರಿ ದಾಖಲೆಯನ್ನು **ನಿ.ಡಿ.29** ಎಂದು ಗುರುತಿಸಲಾಯಿತು. ಸದರಿ ದಾಖಲೆಯ ಪ್ರಕಾರ ವ್ಯವಸ್ಥಾಪಕ ಧರ್ಮದರ್ಶಿಯವರ ಸಹಿ ಮತ್ತು ಮುದ್ರೆಯೊಡನೆ ನನಗೆ ನೇಮಕಾತಿ ಪತ್ರ ನೀಡಿದ್ದಾರೆ ಎಂದರೆ ಸರಿ. ಆ ಸಮಯಕ್ಕೆ ಪ್ರೊ.ಗೋವಿಂದಯ್ಯ ರವರು ಮಿಳಿಂದ ವಿದ್ಯಾಸಂಸ್ಥೆಯ ವ್ಯವಸ್ಥಾಪಕ ಧರ್ಮದರ್ಶಿಯಾಗಿದ್ದರು ಎಂದರೆ ಸರಿ. ಆರೋಪಿ ನನ್ನನ್ನು ಶಿಕ್ಷಕಿಯಾಗಿ ನೇಮಿಸಿಕೊಂಡ ಬಗ್ಗೆ ದಾಖಲೆ ಇರುವುದಿಲ್ಲ. ವಿದ್ಯಾರ್ಥಿಗಳಿಂದ ವಸೂಲು ಮಾಡುತ್ತಿದ್ದ ಅಭಿವೃಧಿ ಶುಲ್ಕ ಮತ್ತು ಮಾಸಿಕ ಶುಲ್ಕವನ್ನು ಜಲಜಾಕ್ಷಿಯವರು ಆರೋಪಿ ಕೈಗೆ ಕೊಟ್ಟಿರುವ ಬಗ್ಗೆ ನಾನು ದಾಖಲೆ ನೋಡಿರುವುದಿಲ್ಲ. ಮಿಳಿಂದ ವಿದ್ಯಾಸಂಸ್ಥೆ ಬಗ್ಗೆ ಅಡಿಟ್ ವರದಿ ಬರುತ್ತಿತ್ತು ಎಂದರೆ ಸರಿ. ಅಡಿಟ್ ವರದಿ ಪ್ರಕಾರ ಆರೋಪಿ ಶಾಲಾ ಅಭಿವೃಧಿ ಶುಲ್ಕ ಮತ್ತು ಮಾಸಿಕ ಶುಲ್ಕವನ್ನು ದುರುಪಯೋಗ ಪಡಿಸಿಕೊಂಡ ಬಗ್ಗೆ ಎಲ್ಲೂ ನಮೂದಿಸಿಲ್ಲ ಎಂದರೆ ಸರಿ. ಅಶ್‌ರಫ್, ಲಾಮಾ, ಧರ್ಮ ರವರು ದಾನವಾಗಿ ಹಣವನ್ನು ಆರೋಪಿ ಕೈಗೆ ಕೊಡುತ್ತಿದ್ದರು ಎಂಬುದನ್ನು ನೋಡಿಲ್ಲ ಮತ್ತು ಆ ಬಗ್ಗೆ ದಾಖಲೆ ಇರುವುದಿಲ್ಲ. ಬೋಟಾ ಫಾರಂ ಮಾಲೀಕ ಅಶ್‌ರಫ್ ರವರಿಂದ ನಾನು ಪ್ರತಿ ತಿಂಗಳು 200 ರೂಪಾಯಿ ಸಂಬಳವಾಗಿ ಪಡೆದುಕೊಳ್ಳುತ್ತಿದ್ದೆ ಎಂದರೆ ಸರಿಯಲ್ಲ. ಮಿಳಿಂದ ವಿದ್ಯಾಸಂಸ್ಥೆಯನ್ನು 2006 ನೇ ಇಸವಿಯಿಂದ ಸರ್ಕಾರದಿಂದ ಅನುದಾನಿತ ಸಂಸ್ಥೆಯಾಗಿ ಘೋಷಿಸಲಾದ ನಂತರವು ವಿದ್ಯಾರ್ಥಿಗಳಿಂದ ಮಾಸಿಕ ಶುಲ್ಕ ಸಂಗ್ರಹಿಸುತ್ತಿದ್ದೇವು ಎಂದರೆ ಸರಿಯಲ್ಲ. 2012 ರಲ್ಲಿ ಅನುದಾನ ನೀಡಲಾಗಿದೆ.

ಅನುದಾನ ನೀಡಿದ ನಂತರವು ವಿದ್ಯಾರ್ಥಿಗಳಿಂದ ಶುಲ್ಕ ಸಂಗ್ರಹಿಸುತ್ತಿದ ಕಾರಣ ಸಾರ್ವಜನಿಕರು ಲೋಕಾಯುಕ್ತರಿಗೆ ದೂರು ನೀಡಿದ ಮೇರೆಗ ವಿದ್ಯಾರ್ಥಿಗಳಿಂದ ಸಂಗ್ರಹಿಸಿದ ಹಣವನ್ನು ವಾಪಸ್ಸು ಕೊಡಬೇಕೆಂದು ಆದೇಶವಾಗಿತ್ತು ಎಂದರೆ ನೆನಪಿಲ್ಲ. ಶಾಲಾ ವಿದ್ಯಾರ್ಥಿಗಳನ್ನು ಕರೆದುಕೊಂಡು ಬರಲು ಬಸ್ ಖರೀದಿಸಲು 6 ಜನ ಶಿಕ್ಷಕರಿಂದ ತಲಾ 25 ಸಾವಿರ ರೂಪಾಯಿ ಕೊಡಬೇಕೆಂದು ದೊಡ್ಡಣ್ಣ ರವರು ಹೇಳಿದ ಬಗ್ಗೆ ದಾಖಲೆ ಇರುವುದಿಲ್ಲ. 7 ಜನ ಶಿಕ್ಷಕರು ಶಾಲಾ ವಾಹನವನ್ನು ಖರೀದಿಸಲು ಒಟ್ಟು ರೂ.1,75,000/- ರೂಪಾಯಿಯನ್ನು ಗೋವಿಂದಯ್ಯ ರವರಿಗೆ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ, ದೊಡ್ಡಣ್ಣ ರವರಿಗೆ ಕೊಟ್ಟಿದ್ದಾರೆ. ಶಾಲೆಗಾಗಿ ಬಸ್ಸು ಖರೀದಿಸಲು ವಿದ್ಯಾಸಂಸ್ಥೆಯ ಧರ್ಮದರ್ಶಿಗಳು ಠರಾವು ಮಾಡಿದ್ದರು ಎಂದರೆ ಸರಿ. ಆ ಠರಾವಿನ ಪ್ರಕಾರ ದೊಡ್ಡಣ್ಣ ರವರಿಗೆ ಹಣ ಕೊಡಬೇಕೆಂದು ಎಲ್ಲೂ ಬರೆದಿಲ್ಲ ಎಂದರೆ ಗೊತ್ತಿಲ್ಲ. ಮಿಳಿಂದ ವಿದ್ಯಾಸಂಸ್ಥೆಯ ಖಾತೆಯನ್ನು ಗೋವಿಂದಯ್ಯ ರವರ ಹೆಸರಿನಲ್ಲಿ ಮೈಸೂರಿನ ಬ್ಯಾಂಕ್ ಆಫ್ ಮಹಾರಾಷ್ಟ್ರದಲ್ಲಿ ತೆರೆಯಲಾಗಿತ್ತು ಎಂದರೆ ಗೊತ್ತಿಲ್ಲ. ದಿನಾಂಕಃ13-06-2006 ರಂದು ಗೋವಿಂದಯ್ಯ ರವರು ಖಾತೆಗೆ ರೂ.1,75,000/-ಯನ್ನು ನಾವು ಬ್ಯಾಂಕ್ ಆಫ್ ಮಹಾರಾಷ್ಟ್ರದಲ್ಲಿ ಜಮೆ ಮಾಡಿದ್ದೇವೆ ಎಂದರೆ ಗೊತ್ತಿಲ್ಲ. ಆ ರೀತಿ ಹಣವನ್ನು ಬ್ಯಾಂಕ್‌ಗೆ ಜಮೆ ಮಾಡಿದ್ದರೂ ಕೂಡ ರೂ.1,75,000/- ರೂಪಾಯಿಯನ್ನು ದೊಡ್ಡಣ್ಣ ರವರಿಗೆ ಕೊಟ್ಟಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶಾಲಾ ವಾಹನ ಖರೀದಿಸಿರುವ ಸಾಲದ ಬಾಬ್ತು ಕಂತಿನ ಹಣವನ್ನು ಪ್ರತಿ ಶಿಕ್ಷಕು ಪ್ರತಿ ತಿಂಗಳು 2 ಸಾವಿರ ರೂಪಾಯಿ ಕೊಡಬೇಕೆಂದಿರುವ ಬಗ್ಗೆ ದಾಖಲೆ ಇರುವುದಿಲ್ಲ. ಆ ರೀತಿ ಪ್ರತಿಯೊಬ್ಬ ಶಿಕ್ಷಕರು ಮಾಸಿಕ 2 ಸಾವಿರ ರೂಪಾಯಿ ಕೊಡಬೇಕೆಂದು ದೊಡ್ಡಣ್ಣ ರವರು ಹೇಳಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾಹನದ ಸಾಲ ಕಂತಿನ ಹಣವನ್ನು ನಾವು ಚೆಕ್ ಮೂಲಕ ಕೊಡುವುದಾಗಿ ಹೇಳಿದಾಗ ದೊಡ್ಡಣ್ಣ ರವರು ನಗದು ರೂಪದಲ್ಲೇ ಕೊಡಿ ಅಂತ ಹೇಳಿರುವ ಬಗ್ಗೆ ದಾಖಲೆ ಇರುವುದಿಲ್ಲ. ನಾವೆಲ್ಲರೂ ಸೇರಿ ದೊಡ್ಡಣ್ಣ ರವರಿಗೆ ರೂ.99,500/- ರೂಪಾಯಿ ಕೊಟ್ಟಿರುವ ಬಗ್ಗೆ ದಾಖಲೆ ಇರುವುದಿಲ್ಲ.

ಶಿಕ್ಷಣ ಸಂಸ್ಥೆಯನ್ನು ಬೆಳೆಸಲು ದೊಡ್ಡಣ್ಣ ರವರು ಅಪಾರ ಶ್ರಮ, ಬುದ್ಧಿವಂತಿಕೆ ಮತ್ತು ಸಮಯ ವಿನಿಯೋಗಿಸಿದ್ದಾರೆ ಎಂರದೆ ಸರಿ. ಪ್ರೊ.ಗೋವಿಂದಯ್ಯ ರವರ ಅಣತಿಯಂತೆ ಮಿಳಿಂದ ವಿದ್ಯಾಸಂಸ್ಥೆಯ ಕಾರ್ಯ ಚಟುವಟಿಕೆಗಳು ನಡೆಯುತ್ತಿತ್ತು ಎಂದರೆ ಸರಿ. ಗೋವಿಂದಯ್ಯ ರವರು ಮಿಳಿಂದ ವಿದ್ಯಾಸಂಸ್ಥೆಯ ವ್ಯವಸ್ಥಾಪಕ ಧರ್ಮದರ್ಶಿ ಆಗಿದುದ್ದರಿಂದ ಸಂಸ್ಥೆಯ ನೌಕರರು ಮತ್ತು ಶಿಕ್ಷಕರನ್ನು ಕೆಲಸದಿಂದ ತೆಗೆಯುವ ಅವಕಾಶ ಇತ್ತು ಎಂದರೆ ಸರಿ. ಗೋವಿಂದಯ್ಯ ರವರು ಹೇಳಿದ ರೀತಿ ನಾನು ಕೇಳದಿದ್ದರೇ ನನ್ನನ್ನು ಸಹಾ ಕೆಲಸದಿಂದ ತೆಗೆಯಬಹುದೆಂಬ ಭಯ ಮೊದಲಿನಿಂದಲೂ ಇದೆ ಎಂದರೆ ಸರಿಯಲ್ಲ. ಪ್ರೊ.ಗೋವಿಂದಯ್ಯ ರವರ ಅಣತಿಯಂತೆ 4 ಜನ ಶಿಕ್ಷಕರನ್ನು ಕೆಲಸದಿಂದ ತೆಗೆದಿದ್ದಾರೆ ಎಂದರೆ ಸರಿ. ಆರೋಪಿ ವಿರುದ್ಧ ಸಾಕ್ಷ್ಯ ನುಡಿಯಲು ನಿರಾಕರಿಸಿದ ಕಾರಣ 4 ಜನ ಶಿಕ್ಷಕರನ್ನು ಕೆಲಸದಿಂದ ತೆಗೆಯಲಾಗಿದೆ ಎಂದರೆ ಗೊತ್ತಿಲ್ಲ.

ಶಾಲೆಯ ದಾಸ್ತನು ವಿಭಾಗದಲ್ಲಿ ಇದ್ದ ಶಾಲೆಯ ಶಾಮಿಯಾನಾ ಮತ್ತು ಪಾತ್ರೆಗಳನ್ನು ದೊಡ್ಡಣ್ಣ ರವರಿಗೆ ವಹಿಸಿದ ಬಗ್ಗೆ ದಾಖಲೆ ನೋಡಿಲ್ಲ. ಶಾಲೆಯ ದಾಸ್ತನು ವಿಭಾಗದ ಮೇಲ್‌ವಿಚಾರಣೆ ನನ್ನ ಬಳಿ ಇದೆ ಎಂದರೆ ಸರಿ. ವಿದ್ಯಾಸಂಸ್ಥೆಯಿಂದ cricket tournament ನಡೆಸಲು ವಿದ್ಯಾರ್ಥಿಗಳಿಂದ ತಲಾ 10 ರೂಪಾಯಿ ಸಂಗ್ರಹಿಸಿ ಆರೋಪಿಗೆ ಕೊಟ್ಟಿದ್ದ ಬಗ್ಗೆ ದಾಖಲೆ ಇರುವುದಿಲ್ಲ. ವಿದ್ಯಾಸಂಸ್ಥೆಯಿಂದ cricket tournament ನಡೆಸಲು ಶಿಕ್ಷಕರಾದ ನಾವೆಲ್ಲರು ಹಣ ಸಂಗ್ರಹ ಮಾಡಿ ಖರ್ಚು ಮಾಡಿರುವುದಾಗಿ ವ್ಯವಸ್ಥಾಪಕ ಧರ್ಮದರ್ಶಿ ರವರಿಗೆ ಪತ್ರ ಬರೆದಿರುವುದನ್ನು ಸಾಕ್ಷಿ ನೋಡಿ ಒಪ್ಪಿರುವುದರಿಂದ ಸದರಿ ದಾಖಲೆಯನ್ನು **ನಿ.ಡಿ.30** ಎಂದು ಗುರುತಿಸಲಾಯಿತು. ಆರೋಪಿ ಮಾವ ಚೆನ್ನಯ್ಯ ರವರು ವಿದ್ಯಾಸಂಸ್ಥೆಯ ಆವರಣದಲ್ಲಿ ಸಪೋಟ, ಸೀಬೆ, ಪರಂಗಿ, ಶುಂಠಿ ಮತ್ತು ಜೋಳ ಬೆಳೆಯಲು ಅವರ ಮತ್ತು ವಿದ್ಯಾಸಂಸ್ಥೆ ನಡುವೆ ಕರಾರು ಆಗಿರುವ ಬಗ್ಗೆ ದಾಖಲೆ ನಾನು ನೋಡಿಲ್ಲ. ಚೆನ್ನಯ್ಯ ರವರೆ ಆ ಎಲ್ಲಾ ಬೆಳೆಗಳನ್ನು ಬೆಳೆದು ತಾವೇ ಪಡೆದುಕೊಳ್ಳುತ್ತಿದ್ದರು ಎಂಬ ಬಗ್ಗೆ ದಾಖಲೆ ನೋಡಿಲ್ಲ. ಶಾಲಾ ವಿದ್ಯಾರ್ಥಿಗಳಿಂದ ಸಂಗ್ರಹಿಸಲಾದ ಶುಲ್ಕವನ್ನು ನನಗೆ ಕೊಡಬೇಕು ಎಂದು ಫೋನ್ ಮೂಲಕ ಆರೋಪಿ ಪಿ.ಆರ್.ಆಷಾ ರವರಿಗೆ ದಮ್ಕಿ ಹಾಕಿದ್ದಾರೆ ಎಂಬುವ ವಿಚಾರವನ್ನು ಯಾರು ಹೇಳಿದ್ದಾರೆ ಎಂದರೆ ಗೊತ್ತಿಲ್ಲ.

**ಸಿ.ಸಿ. ಸಂ.13/2017**

**ಪಿಡಬ್ಲೂಃ 08**

ವಿದ್ಯಾರ್ಥಿಗಳಿಂದ ಸಂಗ್ರಹಿಸಲಾದ ಶಾಲಾ ಶುಲ್ಕವನ್ನು ಸಿಂಡಿಕೇಟ್ ಬ್ಯಾಂಕ್‌ನಲ್ಲಿ ಜಮೆ ಮಾಡಬೇಕು ನನ್ನ ಮತ್ತು ವ್ಯವಸ್ಥಾಪಕ ಧರ್ಮದರ್ಶಿ ರವರ ಜಂಟಿ ಹೆಸರಿನಲ್ಲಿ ಖಾತೆ ತೆರೆಯಲಾಗಿತ್ತು ಎಂದರೆ ಸರಿ. ಆ ಖಾತೆಗೆ ನಾವು ಹಣ ಜಮೆ ಮಾಡಿರುವುದಿಲ್ಲ. ಆ ಹಣವನ್ನು ನಾನು ದುರುಪಯೋಗ ಪಡಿಸಿಕೊಂಡಿದ್ದೇನೆಯೇ ಅಥವಾ ಗೊವಿಂದಯ್ಯ ರವರು ದುರುಪಯೋಗ ಪಡಿಸಿಕೊಂಡಿದ್ದಾರೆಯೇ ಎಂದರೆ ಸರ್ಕಾರಿ ಶುಲ್ಕವನ್ನು ಮಾತ್ರ ಬ್ಯಾಂಕ್‌ನಲ್ಲಿ ಜಮೆ ಮಾಡಿಲು ಆ ಖಾತೆ ತೆರೆದಿದ್ದೆವು. ನನ್ನ ಮತ್ತು ವ್ಯವಸ್ಥಾಪಕ ಧರ್ಮದರ್ಶಿಯವರ ಜಂಟಿ ಹೆಸರಿನಲ್ಲಿ ಇದ್ದ ಮೇಲೆ ಹೇಳಿದ ಬ್ಯಾಂಕ್ ಖಾತೆಗೆ ಸ್ವಲ್ಪ ಹಣ ಜಮೆ ಆಗಿದೆ ಎಂದರೆ ಸರಿಯಲ್ಲ. ಸರ್ಕಾರದಿಂದ ಬಂದ ಹಣವನ್ನು ಮಾತ್ರ ನನ್ನ ಮತ್ತು ವ್ಯವಸ್ಥಾಪಕ ಧರ್ಮದರ್ಶಿಯವರ ಜಂಟಿ ಹೆಸರಿನಿಂದ ಮೇಲೆ ಹೇಳಿದ ಬ್ಯಾಂಕ್ ಖಾತೆಗೆ ಜಮೆ ಮಾಡಬೇಕೆಂದು ಅಡಿಟ್ ವರದಿಯಲ್ಲಿ ನಮೂದಾಗಿದೆ ಎಂದರೆ ನೆನಪಿಲ್ಲ.

ಆರೋಪಿ ಮಾವ ಚೆನ್ನಯ್ಯ ರವರು ಶಾಲಾ ಮಕ್ಕಳನ್ನು ದಾಖಲಿಸಿಕೊಳ್ಳುವಾಗ ಬಂದು ಗಲಾಟೆ ಮಾಡಿರುವ ಬಗ್ಗೆ ಪೋಲೀಸರಿಗೆ ದೂರು ಕೊಟ್ಟಿಲ್ಲ. ಆರೋಪಿಗೆ ಅಪಕೀರ್ತಿ ಬರಲೆಂದು ಗೋವಿಂದಯ್ಯ ರವರ ಮಾತು ಕೇಳಿ ಆರೋಪಿ ಮಾವ ಶಾಲಗೆ ಬಂದು ಗಲಾಟೆ ಮಾಡಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶಿವರಾಜ್ ಎಂಬ ವಿದ್ಯಾರ್ಥಿ ಶಾಲಾ ಶುಲ್ಕವನ್ನು ತಂದಿಲ್ಲ ಎಂಬ ಕಾರಣಕ್ಕೆ ನಾನು ಮುಳುಕೋಲಿನಿಂದ ಹೊಡೆದಿರುವುದಾಗಿ ನನ್ನ ವಿರುದ್ಧ ಬೈಲಕುಪ್ಪೆ ಪೋಲೀಸ್ ಠಾಣೆಯಲ್ಲಿ ಕೇಸು ದಾಖಲಾಗಿ ಚಾರ್ಜ್ ಶೀಟ್ ಸಲ್ಲಿಸಲಾಗಿತ್ತು ಎಂದರೆ ಸರಿ. ವಿದ್ಯಾರ್ಥಿಗಳ ಪೋಷಕರಿಗೆ ರಸೀದಿ ಕೊಡಬೇಡಿ ಎಂದು ಆರೋಪಿ ಶಾಲಾ ಶಿಕ್ಷಕರಿಗೆ ಹೇಳಿರುವ ಬಗ್ಗೆ ಯಾವುದೇ ಬರವಣಿಗೆ ಇರುವುದಿಲ್ಲ. ಆ ರೀತಿ ಆರೋಪಿ ಹೇಳಿರುವುದನ್ನು ಕೇಳಿರುವ ಪೋಷಕರು ಯಾರು ಇರುವುದಿಲ್ಲ. ಗೋವಿಂದಯ್ಯ ರವರು ಮತ್ತು ದೊಡ್ಡಣ್ಣ ರವರ ನಡುವೆ ಹಲವಾರು ವಿಷಯಗಳ ಭಿನಾಭಿಪ್ರಾಯ ಬರುತ್ತಿತ್ತು ಎಂದರೆ ಗೊತ್ತಿಲ್ಲ. ಪ್ರೊ.ಗೋವಿಂದಯ್ಯ ರವರು ಮಿಳಿಂದ ವಿದ್ಯಾಸಂಸ್ಥೆಯಲ್ಲಿ ತಾನು ಹೇಳಿದಂತೆ ನಡೆದುಕೊಳ್ಳಬೇಕೆಂದು ನಿರಂಕುಶವಾಗಿ ನಡೆದುಕೊಳ್ಳುತ್ತಿದ್ದರು ಎಂದರೆ ಗೊತ್ತಿಲ್ಲ.

ಆ ರೀತಿ ನಡೆದುಕೊಂಡಾಗಲೆಲ್ಲಾ ಆರೋಪಿ ಖಂಡಿಸುತ್ತಿದ್ದರು ಎಂದರೆ ಗೊತ್ತಿಲ್ಲ. ಗೋವಿಂದಯ್ಯ ರವರು ಆರೋಪಿಯನ್ನು ಧರ್ಮದರ್ಶಿ ಸ್ಥಾನದಿಂದ ಕಿತ್ತು ಹಾಕಿದ್ದಾರೆ ಎಂದರೆ ಗೊತ್ತಿಲ್ಲ. ಆರೋಪಿ ಈಗ ಮಿಳಿಂದ ವಿದ್ಯಾಸಂಸ್ಥೆಯ ಧರ್ಮದರ್ಶಿಯಾಗಿಲ್ಲ ಎಂದರೆ ಸರಿ. 2009 ರಿಂದ ಆರೋಪಿಯನ್ನು ಧರ್ಮದರ್ಶಿ ಸ್ಥಾನದಿಂದ ಹೊರಗೆ ಉಳಿಸಲಾಗಿದೆ ಎಂದರೆ ಸರಿ. ನನ್ನನ್ನು ಶಾಲಾ ಶಿಕ್ಷಕಿಯಾಗಿ ನೇಮಿಸಿಕೊಂಡಾಗ 25 ವಿದ್ಯಾರ್ಥಿಗಳು ಇದ್ದರು. 2009 ನೇ ಇಸವಿಗೆ 650 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಇದ್ದರು ಎಂದರೆ ಸರಿ. 1990 ರಲ್ಲಿ ಮಿಳಿಂದ ವಿದ್ಯಾಸಂಸ್ಥೆ ಪ್ರಾರಂಭವಾಗಿದೆ ಎಂದರೆ ಸರಿ. ಚಿಕ್ಕದಾಗಿ ಪ್ರಾರಂಭವಾದ ವಿದ್ಯಾಸಂಸ್ಥೆ ಈಗ 10 ಎಕರೆಯಲ್ಲಿ ನಿರ್ಮಿಸಲಾಗಿದೆ ಎಂದರೆ ಸರಿ. ಆ ರೀತಿ ಬೆಳೆಯುವುದಕ್ಕೆ ಆರೋಪಿ ತುಂಬ ಶ್ರಮ ವಹಿಸಿದ್ದಾರೆ ಎಂದರೆ ಸರಿ.

ವಿಚಾರಣಾ ಅಧಿಕಾರಿ ಮುಂದೆ ಶುಲ್ಕದ ಬಗ್ಗೆ ನಾನು ಹೇಳಿಕೆ ಕೊಟ್ಟಿದ್ದೇನೆ. ಅಡಿಟ್ ವರದಿಗೆ ಅನುಗುಣವಾಗಿ ಹೇಳಿಕೆ ಕೊಟ್ಟಿದ್ದೇನೆಯೇ ಅಥವಾ ಅದಕ್ಕೆ ವಿರುದ್ಧವಾಗಿ ಹೇಳಿಕೆ ಕೊಟ್ಟಿದ್ದೇನೆಯೇ ಎಂದರೆ ನೆನಪಿಲ್ಲ. ಆರೋಪಿ ಮಿಳಿಂದ ಸಂಸ್ಥೆಯ ಹಣ ದುರುಪಯೋಗ ಪಡಿಸಿಕೊಂಡ ಬಗ್ಗೆ ಅಡಿಟ್ ವರದಿಯಲ್ಲಿ ವಿಚಾರಣಾ ಅಧಿಕಾರಿಯವರಿಗೆ ಹೇಳಿಕೆ ಕೊಟ್ಟಿಲ್ಲ. ಪ್ರೊ.ಗೋವಿಂದಯ್ಯ ರವರ ಅಪೇಕ್ಷೆಯಂತೆ ನಾನು ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಪ್ರೊ.ಗೋವಿಂದಯ್ಯ ರವರ ಮಾತು ಕೇಳಿ ಆರೋಪಿ ಮಿಳಿಂದ ವಿದ್ಯಾಸಂಸ್ಥೆಯ ಹಣ ದುರುಪಯೋಗ ಪಡಿಸಿಕೊಂಡಿರುವುದಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

***<u>ಮರುವಿಚಾರಣೆ ಇಲ್ಲ.</u>***
***(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

***ಓ.ಹೇ.ಕೇ.ಸರಿ. ಇದೆ.***

***ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.***
***ಪಿರಿಯಾಪಟ್ಟಣ.***